**Order Sheet**
**In the Court Of: III Addl. CIVIL JUDGE AND JMFC BELAGAVI**
**AT BELGAUM**
**F.R.No:O.S./949/2013**
**Case Reg.No: O.S./947/2013**

| **Plaintiff** | V E R S U S | **Defendent** |
|---|---|---|

---

| | |
|---|---|
| **1)Smt. Pushpa Wo. Veerappa Badiger &2 others** | **1)Shri. Bhimarao So. Irappa Sutar &7 others** |
| **2)Smt. Bharati Wo. Mohan Badiger** | **2)Smt. Anasuya Wo. Bhimarao Sutar**<br>**3)Shri. Suresh So. Bhimarao Sutar**<br>**4)Shri. Ramesh So. Bhimarao Sutar**<br>**5)Shri. Ramchandra So. Irappa Sutar**<br>**6)Shri. Kallappa So. Ningappa Patil**<br>**7)Shri. Rajaram So. Ningappa Patil** |

ಗೌರವಾನ್ವಿತ 3ನೇ ಅಧೀಕ ಸಿವಿಲ್ ಮತ್ತು ಜೆಎಮಎಫಸಿ ನ್ಯಾಯಾಲಯ ಬೆಳಗಾವಿ

ಅಸಲು ದಾವಾ ನಂಃ 947-2013
ಪಿ. ಡಬ್ಲ್ಯೂ-1

ದಿಃ 07-10-2016 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಭೋದಿಸಲಾಯಿತು.
ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ

ದಾವಾ ಆಸ್ತಿಯು ನನ್ನ ಅಜ್ಜನ ಕಾಲದಿಂದ ಬಂದ ಆಸ್ತಿಗಳು ಎಂದರೆ ಸರಿ. ನನ್ನ ತಂದೆ ನನ್ನ ಅಜ್ಜನಾದ ಈರಪ್ಪಾ ಸುತಾರರವರಿಗೆ ಮೊದಲನೇ ಮಗ ಎಂದರೆ ಸರಿಯಲ್ಲ 2ನೇ ಮಗ ಎಂದು ನುಡಿಯುತ್ತಾರೆ. ನನ್ನ ಅಜ್ಜನಿಗೆ 4 ಜನ ಗಂಡು ಮಕ್ಕಳು ಎಂದರೆ ಸರಿ. ಅವರುಗಳು ಪ್ರತಿವಾದಿ ನಂ. 1, 5, 8 ಮತ್ತು 9 ಎಂದರೆ ಸರಿ. ನನ್ನ ತಂದೆ ಕಾರ್ಪೆಂಟರ ಕೆಲಸ ಮಾಡುತ್ತಾರೆ. ನನ್ನ ತಂದೆ 3ನೇ ತರಗತಿ ಶಾಲೆ ಓದಿದ್ದರೂ ಸಹ ಅವರಿಗೆ ವ್ಯವಹಾರ ಜ್ಞಾನ ಚೆನ್ನಾಗಿತ್ತು ಎಂದರೆ ಸರಿ. ನನ್ನ ಕಾಕಂದಿರಾದ ಪ್ರತಿವಾದಿ ನಂ. 5, 8 ಮತ್ತು 9 ರವರಿಗೆ ವ್ಯವಹಾರ ಜ್ಞಾನ ಕಡಿಮೆ ಇದ್ದು ದುಡಿದು ಜೀವನ ನಡೆಸುತ್ತಾರೆ ಎಂದರೆ ಸರಿ. ನನ್ನ ಅಜ್ಜ ಈರಪ್ಪ ತೀರಿಕೊಂಡ ನಂತರ ನನ್ನ ತಂದೆ ಒಟ್ಟು ಕುಟುಂಬದ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನಾನು ದಾವೆ ಹೂಡುವವರೆಗೂ ನನ್ನ ತಂದೆಯೇ ಒಟ್ಟು ಕುಟುಂಬದ ವ್ಯವಹಾರವನ್ನು ನೋಡಿಕೊಳುತ್ತಿದ್ದರು ಎಂದರೆ ಸರಿ. ದಾವಾ ಆಸ್ತಿಯ ಚಕ್ಕುಬಂದಿ, ಅಳತೆ ಮತ್ತು ಸರ್ವೆ ನಂಬರಗಳನ್ನು ಹೇಳಲು ಬರುವುದಿಲ್ಲ. ನಾನು 9ನೇ ತರಗತಿವರೆಗೂ ಓದಿರುತ್ತೇನೆ ನನಗೆ ಓದಲು ಬರೆಯಲು ಬರುತ್ತದೆ. ಈ ದಾವೆ ಹೂಡಲು ಮಾಹಿತಿಯನ್ನು ನಾನು ವಕೀಲರಿಗೆ ಕೊಟ್ಟಿರುತ್ತೇನೆ. 1992 ರಲ್ಲಿ ನನ್ನ ದಾವಾ ಪತ್ರದ 4ನೇ

ಪ್ಯಾರಾದಲ್ಲಿ ಹೇಳಿರುವಂತೆ ದಾವಾ ಆಸ್ತಿಯ ಮೌಖಿಕ ಪಾಲು ವಿಭಾಗ ಆಗಿರುತ್ತದೆ ಎಂದರೆ ಸರಿ. ನನ್ನ ತಂದೆ ಮತ್ತು ಅವರ ಅಣ್ಣತಮ್ಮಂದಿರ ನಡುವೆ ಪಾಲು ವಿಭಾಗ ಆಗಿರುತ್ತದೆ. ಇವರ ನಡುವೆ ಯಾರಿಗೆ ಯಾವ ಪಾಲು ಬಂದಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ನ್ಯಾಯಾಲಯದ ದಾಖಲಾತಿಗಳನ್ನು ನೋಡಿ ಸಾಕ್ಷಿ ನನಗೆ ಖಚಿತವಾಗಿ ಯಾರಿಗೆ ಎಷ್ಟು ಪಾಲು ಎಂದು ನನಗೆ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಅವರ ಅಣ್ಣತಮ್ಮಂದರ ನಡುವೆ ಪಾಲು ಆಗಿರುತ್ತದೆ ಎಂದು ನನಗೆ ಹೇಳಿದ್ದರು ಆ ಕಾರಣದಿಂದ ನಾನು ನನ್ನ ದಾವಾ ಪತ್ರದಲ್ಲಿ ಹೇಳಿರುತ್ತೇನೆ.

ಈ ದಾವಾ ಆಸ್ತಿಗಳನ್ನು ಹೊರತುಪಡಿಸಿ ಈರಪ್ಪಾ ರವರ ಕುಟುಂಬದ ಬೇರೆ ಯಾವ ಆಸ್ತಿಯೂ ಇರುವುದಿಲ್ಲ ಎನ್ನುವ ಮಾಹಿತಿ ನನಗೆ ಇರುತ್ತದೆ ಎಂದರೆ ಸರಿ. ನನ್ನ ಕಾಕಂದಿರಿಗೆ ಯಾವ ಆಸ್ತಿಯು ಪಾಲಿಗೆ ಬಂದಿರುತ್ತದೆ ಎಂದು ಮತ್ತು ಕಂದಾಯ ಇಲಾಖೆ ಮತ್ತು ಇನ್ನಿತರ ಇಲಾಖೆಯಿಂದ ಬಂದ ಕಾಗಪತ್ರಗಳನ್ನು ಹಾಜರುಪಡಿಸಲು ನನಗೆ ಯಾವುದೇ ಅಡಚಣೆ ಇಲ್ಲ ಎಂದರೆ ಸರಿ. ನನ್ನ ತಂದೆ ನನ್ನ ಅಜ್ಜನ ಆಸ್ತಿಗೆ ಎಷ್ಟು ಪಾಲುದಾರನಾಗಿರುತ್ತಾನೋ ಅಷ್ಟೇ ನನ್ನ ಕಾಕಂ ದಿರು ಪಾಲುದಾರರು ಆಗಿರುತ್ತಾರೆ ಎಂದರೆ ಸರಿ. ನನ್ನ ಕಾಕಂದಿರ ಪಾಲನ್ನು ಅವರಿಗೆ ಕೊಡಲು ನನಗೆ ಯಾವುದೇ ತಕರಾರು ಇಲ್ಲ ಎಂದು ಪ್ರಶ್ನಿಸಿದಾಗ ಅವರ ಪಾಲನ್ನು ಆಗಲೇ ಕೊಡಲಾಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಕಾಕಂ ದಿರಿಗೆ ಯಾವ ಯಾವ ಪಾಲನ್ನು ಕೊಟ್ಟಿರುತ್ತಾರೆ ಎಂದು ದಾಖಲಾತಿಗಳನ್ನು ನೋಡಿ ಮುಂದಿನ ಸಾಕ್ಷಿ ವಿಚಾರಣೆಯಲ್ಲಿ ಹೇಳುತ್ತೇನೆ ಎಂದು ನುಡಿಯುತ್ತಾರೆ ನನ್ನ ಕಾಂದಿರಿಗೆ ಈಗಾಗಲೇ ಪಾಲು ಕೊಡಲಾಗಿದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈಗಾಗಲೇ ಹೇಳಿರುವ ಹಾಗೇ ಮೌಖಿಕ ಪಾಲು ವಿಭಾಗ ಆಗಿರುತ್ತದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿ. ನನ್ನ ಕಾಕಂದಿರ ಪಾಲಿನ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ರೆವಿನ್ಯೂ ಇಲಾಖೆ ಮುಂದೆ ಸುಳ್ಳು ಪ್ರಮಾಣ ಪತ್ರವನ್ನು ನೀಡಿ ತನ್ನ ಹೆಸರನ್ನು ಹಚ್ಚಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಹೆಸರು ಹಚ್ಚಿಕೊಂಡಿರುವ ವಿಷಯವಾಗಿ ನನ್ನ ಕಾಕಂದಿರು ಅಸಿಸ್ಟಂಟ ಕಮೀಷನರರವರ ಮುಂದೆ ಅಪೀಲು ಮಾಡಿದ್ದರು ಎಂದರೆ ನನಗೆ ನೆನಪಿಲ್ಲ. ಸದರಿ ದಾವೆಯು ತಾಂತ್ರಿಕ ಕಾರಣಗಳಿಂದ ವಜಾಗೊಂಡಿರುತ್ತದೆ ಎಂದರೆ ನನಗೆ ಮಾಹಿತಿ ಇಲ್ಲ. ನನ್ನ ತಂದೆಯ ಜೊತೆ ನನ್ನ ಕಾಕಂದಿರಿಗೂ 1-4 ನೇ ಭಾಗ ಪಾಲು ಇರುತ್ತದೆ ಎಂದರೆ ಸರಿಯಲ್ಲ.
ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ನೀಡಲಾಯಿತು.
(ಸಾಕ್ಷಿಯ ಹೇಳಿ ಕೆಯನ್ನು ತೆ.ನ್ಯಾ.ದಲ್ಲಿ ನನ್ನ ಉಕ್ತಲೇಖ ನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿಯಿದೆ.
-ಸಹಿ-
3ನೇ ಅಧಿಕ ಸಿವಿಲ್ ಮತ್ತು ಜೆಎಮಎಫ್‌ಸಿ ನ್ಯಾಯಾಧೀಶರು,
ಬೆಳಗಾವಿ.